Regd No BG 155

Sri "SATYAVADI"
— DAILY —
MYSORE4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಆರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

14—4—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ.
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಭಾರತ ರತ್ನ ವಿಶ್ವೇಶರಯ್ಯನವರ ನಿಧನ

ಮೈಸೂರಿನ ಮಾಜಿ ದಿವಾನರಾದ ಭಾರತ ರತ್ನ, ಡಾ|| ಎಂ ವಿಶ್ವೇಶ್ವರಯ್ಯನವರು ಈ ದಿನ ಬೆಳಿಗ್ಗೆ 6-15ಗಂಟೆಯಲ್ಲಿ ಬೆಂಗಳೂರಿನಲ್ಲಿ ನಿಧನರಾದರೆಂದು ವಿಷಾದಿಸುತ್ತೇವೆ ಅವರಿಗೆ 100ವರ್ಷ ವಯಸ್ಸಾಗಿದ್ದವು.

ಮೈಸೂರು ಪೌರಸಭೆಯು ವಿಶೇಷ ಸಭೆ ಅವರ ನಿಧನಕ್ಕೆ ಸಂತಾಪಿಸಿದೆ

ಬಲಯುತ ವಿರೋಧ ಪಕ್ಷ

ನವದೆಹಲಿ 13— ಪಾರ್ಲಿಮೆಂಟಿನಲ್ಲಿ ಸ್ವತಂತ್ರ ಪಾರ್ಟಿ ನಾಯಕತ್ವದಲ್ಲಿ ಬಲಯುತವಾದ ವಿರೋಧ ಪಕ್ಷ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಮಿಡತೆ ಹಾವಳಿ

62—63 ರಲ್ಲಿಯೂ ತೀವ್ರವಾದ ಮಿಡತೆಯ ಹಾವಳಿಯು ಸಂಭವನೀಯವೆಂದು ಅದನ್ನು ಎದುರಿಸಲು ಸಂಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ರಾಜ್ಯ ಸರ್ಕಾರಗಳಿಗೆ ತಿಳಿಸಲಾಗಿದೆ ಎಂದು ನವದೆಹಲಿ ವಾರ್ತೆ.

× ಬೆಂಗಳೂರು 13— 17ನೇ ರಾಷ್ಟ್ರೀಯ ಸೈಕಲ್ ರೇಸು ಈ ಮಧ್ಯಾಹ್ನ ಕಂಠೀರವ ಸ್ಟೇಡಿಯಂನಿಂದ ಪ್ರಾರಂಭವಾಯಿತು.

ಪ್ರಾರ್ಥನೆ ಫಲ

ಪ್ರಾರ್ಥನೆ ಫಲ ನೋಡಿ — ಪಾಲಘಾಟು ಜಿಲ್ಲೆಯ ಸೆಲ್ಲಾ ಗ್ರಾಮದಲ್ಲಿ ಕಳೆದವಾರ ಒಬ್ಬ ಹಳ್ಳಿಗನ ಮೇಲೆ ಒಂದು ಹುಲಿ ಹಾರಿ ಅವನ ಕಾಲನ್ನು ಕಚ್ಚಿ ಹಿಡಿಯಿತು; ಆಗ ಅವನು ತನ್ನ ಎರಡೂ ಕೈಗಳನ್ನು ಜೋಡಿಸಿ ಜೀವದಾನಕ್ಕಾಗಿ ಪ್ರಾರ್ಥಿಸಿದನೆಂದೂ, ಹುಲಿಯು ಅವನನ್ನು ಬಿಟ್ಟು ಹೊಂಟು ಹೋಯಿತೆಂದೂ, ಅವನು ಮನೆಗೆ ಕುಂಟುಕೊಂಡು ಬಂದು ನಂತರ ಆಸ್ಪತ್ರೆಗೆ ಸಾಗಿಸಲ್ಪಟ್ಟನೆಂದೂ ವರದಿಯಾಗಿದೆ.

★

ಮುದ್ರಣ ಟೆಕ್ನಾಲಜಿಗಾಗಿ 3 ಪ್ರಾಥಮಿಕ ಶಾಲೆಗಳನ್ನು ಮೈಸೂರು ರಾಜ್ಯದಲ್ಲಿ ಭಾರತ ಸರ್ಕಾರ ಆರಂಭಿಸಲಿದೆ ಎಂದು ನಿನ್ನೆ ಬೆಂಗಳೂರಿನಲ್ಲಿ ಶ್ರೀ ಎಸ್. ಆರ್. ಕಂಠಿಯವರು ತಿಳಿಸಿದರು.

ನವದೆಹಲಿ 13— ದೇಶದ ಪಂಚಾಯ್ತಿಗಳಿಗಾಗಿ ಮತೀಯ ಸೌಹಾರ್ದ್ರದ ಅವಶ್ಯಕತೆಯನ್ನು ಮೂವರು ಕಾರಾಸಿಂಗರು ಒತ್ತಿ ಹೇಳಿದರು.

ತಿರಸ್ಕರಣ

ಕಲ್ಕತ್ತ 13— ಅಮೇರಿಕಾ ಮೂರು ಕಟ್ಟಿಗೆಗಳಿಗೆ ಅದಲುಬದಲು ಏರ್ಪಾಡಿನ ಮೇಲೆ 20 ಟನ್ ಸಕ್ಕರೆ ಸಂಬಾಚಿನ ಹಡಗಾಜಿನಲ್ಲಿ ಭಾರತ ಧಡಪಡಿಕೆಯಾಸ್ತು ಮಾಡಲು ತಿರಸ್ಕರಿಸಿತು

ಪೋಲೀಸರ ಮೇಲೆ ದಾಳಿ

ಜಗದಾಲಪುರ 13— ಪೋಲೀಸು ಅಧಿಕಾರಿಯೊಬ್ಬರ ಮೇಲೆ ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ಕಂಜೋಲಿ ಆದಿವಾಸಿ ಗ್ರಾಮದಲ್ಲಿ 50 ಮಂದಿ ಆದಿವಾಸಿಗುಂಪು ಧಾಳಿ ನಡೆಸಿತು; 5 ಮಂದಿ ದಸ್ತಗಿರಿಮಾಡಲ್ಪಟ್ಟಿದ್ದಾರೆ.

ಧೂಮಪಾನದ ಫಲ

ಲಂಡನ್ 13— ಹೊಗೆ ಸೇದುವ ಗರ್ಭಿಣಿ ಹೆಂಗಸರು ಹೆರುವ ಮಕ್ಕಳು ಸಣ್ಣಗೂ ಕಾಲಕ್ಕೆ ಮುಂಚೆ ಹುಟ್ಟುವವೆಂದೂ ಹೇಳಲಾಗಿದೆ

ಸಭಾತ್ಯಾಗ

ಜಯಪುರ 13— ಮಂತ್ರಿಗಳು ಕೊಟ್ಟ ಉತ್ತರ ಅತೃಪ್ತಿಕರವೆಂದೂ ರಾಜಸ್ಥಾನ ಶಾಸನಸಭೆಯಲ್ಲಿ ವಿರೋಧ ಪಕ್ಷದವರು ಸಭಾ ಪರಿತ್ಯಾಗ ಮಾಡಿದರು

ಪುಸ್ತಕಕ್ಕೆ ನಿಶೇಧ

ತ್ಯಗಂಬಂ ವಿರುದ್ಧ ಲೇಖನವಿದ್ದ ಮನೋಹರಂಕಹಾನಿಯಾ ಪುಸ್ತಕವನ್ನು ಪಶ್ಚಿಮ ಬಂಗಾಳ ಸರ್ಕಾರ ಪ್ರತಿಬಂಧಿಸಿದೆ ಎಂದು ಕಲ್ಕತ್ತಾ ವಾರ್ತೆ. ಈಗ ಮುಸ್ಲಿಂರ ಚಳುವಳಿ ನಿಂತಿದೆ.

ನೇತಾಜಿ ?

ಜಲಪೈಗುರಿ ಜಿಲ್ಲ ಸೇಲಮಾ ಆಶ್ರಮದಲ್ಲಿರುವ ಸಾಧುವು ನೇತಾಜಿ ಸುಭಾಷಚಂದ್ರ ಬೋಸರೆಂದು ಸಹಸ್ರಗಟ್ಟಲೆ ಜನ ಅಭಿಪ್ರಾಯಪಡುತ್ತಿದ್ದಾರೆ. ಅವರು ಒಂದು ದಿನ ಹೊರಗೆಬಂದು ತಮ್ಮ ಗುರುತನ್ನು ತೋರುವರೆಂದು ನಂಬುತ್ತಿದ್ದಾರೆ.

ವಿವಿಧ ವಿಷಯಗಳು

ಪಾರ್ಲಿಮೆಂಟಿನ ಭವನದಲ್ಲಿ ಮಂತ್ರಿಗಳ ಸಂಖ್ಯೆಗಿಂತ ಕೊಠಡಿಗಳ ಸಂಖ್ಯೆ ಕಡಿಮೆ ಇರುವುದರಿಂದ ಕೆಲವು ಕೊಠಡಿಗಳಲ್ಲಿ ಇಬ್ಬರು ಮಂತ್ರಿಗಳು ವಾಸಿಸಬೇಕಾಗಿದೆ ಎಂದು ದಿಲ್ಲಿ ವಾರ್ತೆ.

ತಿರುವೇಂದ್ರಂನಿಂದ ಬಂದಿರುವ ವರದಿಯ ಪ್ರಕಾರ, ಗುರುವಯೂರು ದೇವಾಲಯದ ಗರ್ಭಗುಡಿ ಮೇಲೆ ಭಂಗಾರದ ಚಾವಣಿಹಾಕಲು ಮೂರುಕಾಲು ಲಕ್ಷ ರೂ ಮಂಜೂರಾಗಿದೆ. ಬೇಕಾಗುವ ಭಂಗಾರದಲ್ಲಿ ಶೇಕಡ 90 ರಷ್ಟು ಕಾಣಿಕೆ ರೂಪವಾಗಿ ಬಂದಿವೆ

ಬೊಂಬಾಯಿನ ಕೃಷ್ಣಮೆನನ್ ಜಿಲ್ಲೆಯಲ್ಲಿ 3 ನೇಯ ಕಮ್ಯೂನಿಸ್ಟ್ ರಹಸ್ಯದಳ ಇರುವುದೆಂದೂ, ಎಕ್ಕೆರಡು ಸೈಮಾಸ್ಕೋ ಹಾಗೂ ಪೀಕಿಂಗಿನಿಂದ ಕಾರ್ಯ ನಡೆಸುವುದೆಂದೂ ಫಿಲ್ಬರ್ಂವರು ವಾಷಿಂಗ್ಟನ್ನಲ್ಲಿ ತಿಳಿಸಿರುವರು.

ಪೌರಸಭೆ

ಮೈಸೂರು ಪೌರಸಭೆಯ ಕಮಿಷನರಂತಾದ ಶ್ರೀ ಬಿ. ನಂಜುಂಡಗೌಡರು ಮೊನ್ನೆ ಮೈಸೂರು ಪೌರಸಭೆಯಲ್ಲಿ 62-63 ನೇಯ ಸಾಲಿನ ಅಂದಾಜುಪಟ್ಟಿಯ ಬಗ್ಗೆ ಮಾತನಾಡುತ್ತಾ, ಪೌರಸಭೆಯ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿಲ್ಲ ವೆಚ್ಚ ಹೆಚ್ಚಬೇಕಿದೆ, ಅದನ್ನು ಸಾಧ್ಯವಾಗಿಸಲು ಉತ್ಪಾದನೆ ಹೆಚ್ಚಿಸಿಕೊಳ್ಳಬೇಕು ಎಂದರು. ಪೌರಸಭೆ ಅಧ್ಯಕ್ಷ ಶ್ರೀ ಹೆಚ್ ಕೆಂಪೇಗೌಡರು ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಪೌರಸಭೆ ಹೊಸ ಕಂದಾಯವನ್ನು ವಿಧಿಸಿಲ್ಲ ಅಥವಾ ಇರುವ ಕಂದಾಯವನ್ನು ಹೆಚ್ಚಿಸಿಲ್ಲ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಸುಜೋಯಿಸರಿಂದ

15 ಏಕಾದಶಿ ವ ಖ

೦೦೦

ಕುಂಭಮೇಳಕ್ಕಾಯುಕ್ತ ನಿನ್ನೆ ಗಂಗಾ ನದಿಯಲ್ಲಿ 25ಲಕ್ಷ ಜನ ಸ್ನಾನಮಾಡಿದ್ದಾರೆ

ಕು ಂ ಭ ಾ ಮೆ ೀ ಳ

ಹರಿದ್ವಾರದಲ್ಲಿ ಸಿನ್ಹೆ ಕುಂಭ ಮೇಳ ಸಂಭ್ರಮದಿಂದ ನೆರೆವೇರಿತು ; ರೂರ್ಕಿ ಯಿಂದ ಹೃಷಿಕೇಶದವರೆಗೆ 80 ಚದುರಮೈಲಿ ಸ್ಥಳದಲ್ಲಿ ಯಾತ್ರಿಕರ ಕ್ಯಾಂಪ್ ಆಗಿ ದ್ದಿತು ; ಎಲ್ಲ ರಸ್ತೆಗಳೂ ಮೋಕ್ಷ ತೀರ್ಥದ ಕಡೆಗೆ ಹೋಗುತ್ತಿದ್ದವು — 12 ವರ್ಷ ಗಳಿಗೊಂದಾವರ್ತಿ ಕುಂಭಮೇಳ ಬರುವುದು : ಆಗ್ಗೆ ಈ ಸ್ಥಳದಲ್ಲಿ ಈ ಪವಿತ್ರ ಗಂಗಾ ನದಿಯಲ್ಲಿ ಸ್ನಾನಮಾಡಿದರೆ ಅನಂತ ಸಕಲ ಪಾಪವೂ ಪರಿಹಾರವಾಗಿ ಜನನ ಮರಣ ಚಕ್ರದಿಂದ ಬಿಡುಗಡೆಯಾಗಿ ಮೋಕ್ಷ ಲಭಿಸುವದೆಂದು ಭಕ್ತರ ನಂಬಿಕೆ — ಹರಿದ್ವಾರವು ಒಂದು ಸೂತನ ಪ್ರಪಂಚವೇ ಆಗಿದ್ದು, ಎಲ್ಲೆಲ್ಲೂ ದೀಪಾಲಯುಗಳ ಗಂಟೆ ಶಬ್ದ ಮಂತ್ರ ಪಠಣ, ಪವಿತ್ರ ಗ್ರಂಥಗಳ ಓದುವಿಕೆ, ಕೇಳಿಬರುತ್ತಿತ್ತು ; ರಾತ್ರೆ ಅಸಂಖ್ಯಾತ ದೀಪಗಳು ಮಿಂಚುತ್ತಿದ್ದವು — ಯಾತ್ರಿ ಕರು ಗಂಗಾನದಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು 18 ಸೇತುವೆಗಳು ನಿರ್ಮಿಸಲಾಗಿವೆ ; ಸ್ನಾನಘಟ್ಟಕ್ಕೆ ಜನ ತೊಂದರೆಯಿಲ್ಲದೆ ಹೋ ಗಿ ಬರಲು 17 ಒಕ್ಕ ವೇ ಮಾರ್ಗಗಳ ಏರ್ಪಾಡಿತ್ತು — 500 ಬಸ್ಸುಗಳು ರಸ್ತೆಯ ಓಡಾಡುತ್ತಿವೆ : 500 ಹಾಸಿಗೆಗಳುಳ್ಳ 20 ಆಸ್ಪತ್ರೆಗಳು ತೆರೆಯಲಾಗಿದೆ ; 400 ಡಾಕ್ಟರುಗಳೂ ನರ್ಸುಗಳೂ ಸೇರಿದ್ದಾರೆ ; ದರ್ಶನ ಮತ್ತು ಪವಿತ್ರ ಸ್ನಾನಕ್ಕೆ ತಾಯಂದಿರು ಹೋದಾಗ ಮಕ್ಕಳನ್ನು ನೋಡಿಕೊಳ್ಳಲು ಅನೇಕ ಮಕ್ಕಳ ಶಿಬಿರ ಗಳು ಸ್ಥಾಪಿಸಲಾಗಿವೆ : ಜನರು ಉಚಿತ ಭೋಜನ ಪಡೆಯಲು ಅನ್ನಕ್ಷೇತ್ರಗಳು ತೆರೆಯಲಾಗಿವೆ ; ದಿನಕ್ಕೆ 40 ಲಕ್ಷ ಗ್ಯಾಲ್ಸ್ ಶುದ್ಧಿಮಾಡುವ ನೀರು, ಹೇರಳವಾಗಿ ವಿದ್ಯುಚ್ಛಕ್ತಿ ಸಂಬಂಧವು ಏರ್ಪಾಡಿಸಲಾಗಿದೆ ; 500 ಟೆಲಿಫೋನುಗಳು ಹಾಕಲಾ ಗಿದೆ : ಅಗಾಧ ಪೋಲೀಸು ಪಡೆಯ ಜೊತೆಗೆ 4000 ಸ್ವಯಂಸೇವಕರಿದ್ದಾರೆ.

★

ಥಿಮ್ಮಾದು ಗೊತ್ತಿರಲಾರದು !

18 1 ೨ ಬ್ರಿಟಿಷ್ ವಸ್ತುಪ್ರದರ್ಶನದಲ್ಲಿ ಬ್ರಿಟಿಷ್ ಬಹುಭಾಷಾವಿಶಾರದ ಎಡ್ವಿನ್ ನಾರಸ್ ಇಂಗ್ಲೀಷು ಪುಸ್ತಕಗಳ ತನ್ನ ತರ್ಜುಮೆಯನ್ನು 4 ಖಂಡಗಳ 53 ವಿವಿಧ ಭಾಷೆಗಳಿಗೆ ಮಾಡಿರುವುದನ್ನು ಪ್ರದರ್ಶಿಸಿದರು.

೦೦೦೦

' ನಾಯಿಗಳಿವೆ ಎಚ್ಚರಿಕೆ ' ಬೋರ್ಡುಗಳು 1900 ವರ್ಷದಷ್ಟು ಹಿಂದಿನ ದು ; ಕ್ರಿ ಶ 79 ರಲ್ಲಿ ವಿಸೂವಿಯಸ್ ಅಗ್ನಿಪರ್ವದ ಸಿಡಿದಾಗ ಪಾಂ ಪೇಯಿನ ವೊಂನೊಬ್ಬನು ತನ್ನ ಮನೆಯ ಮುಂದೆ ಈ ಬೋರ್ಡು ಹಾಕಿದ್ದನು.

೦೦೦೦

ಹಿಂದೂ ಸಾಗರದ ಫ್ರಿಗೇಟು ದ್ವೀಪಗಳಲ್ಲಿ ಕೇವಲ ಬೆಕ್ಕುಗಳು ನಿವಾಸಿ ಗಳಾಗಿರುವವು ; ಅಲೆಗಳ ಹೊಡೆತದಿಂದ ತೀರದಲ್ಲಿ ಬಂದುಬೀಳುವ ಮೀನುಗಳ ನ್ನು ತಿನ್ನಲು ಈ ಬೆಕ್ಕುಗಳು ರಾತ್ರಿಯಲ್ಲಿ ಜೋರಾಗಿ ಮಿಯ್ಯಾಂ ಅನ್ನು ತ್ತಾ ಸೇರುವವು : ಸುಮಾರು 10 ಸಾವಿರಕ್ಕೂ ಹೆಚ್ಚಾಗಿವೆ ; ಹಿಂದೆಂದೋ ಒಂದು ಹ ಡಗು ಇಲ್ಲಿ ಒಡೆದುಹೋಗಿ, ಅದರೊಳಗಿದ್ದ ಬೆಕ್ಕುಗಳು ಇಲ್ಲಿ ನೆಲೆಸಿ, ಈಗಿನವು ಗಳಿಗೆ ಮೂಲಪುರುಷರಾಗಿರುವವೆಂದು ಊಹಿಸಲಾಗಿದೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಸ್ತುತ್ಯಾರ್ಹ 10 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 4 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾರಂಗಪಾಣಿ, ಎಂ ವಿ ರಾಜಮ್ಮ ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯಾ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು



— — Versatile Caribou — —

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.